## ಗೂಗ್ಲ್ ಫೋಟೋಸ್

ಆ್ಯಂಡ್ರಾಯ್ಡ್‌ನ ಈ ಆ್ಯಪ್ ಕ್ಲೌಡ್‌ಗೆ ಫೋಟೋಗಳನ್ನು ಸ್ವಯಂಚಾಲಿತವಾಗಿ ಅಪ್‌ಲೋಡ್ ಮಾಡುತ್ತದೆ. ಸಂಗ್ರಹ ಸಾಮರ್ಥ್ಯಕ್ಕೆ ಯಾವುದೇ ಮಿತಿ ಇಲ್ಲ. ಫೋಟೋಗಳಿಗೆ ತಮಾಷೆಯ ಆದರೆ ಸೃಜನಾತ್ಮಕ ಪರಿಣಾಮಗಳನ್ನು ಸೇರಿಸಲು ಟೂಲ್‌ಗಳಿವೆ. ಮೇಲ್ಮೈ ಸರಳವಾಗಿದ್ದು, ಸ್ಪಷ್ಟವಾಗಿದೆ. 16 ಮೆಗಾ ಪಿಕ್ಸೆಲ್‌ವರೆಗಿನ ಫೋಟೊಗಳನ್ನು ಕೂಡಾ ಸಂಗ್ರಹಿಸಬಹುದು. ಚಿತ್ರಗಳನ್ನು ಹುಡುಕಾಡಲು ಯಾವುದೇ ತೊಂದರೆ ಪಡಬೇಕಾಗಿಲ್ಲ. ಹಳೆಯ ಗೂಗ್ಲ್ ಫೋಟೊ ಐಕಾನ್ ಅನ್ನು ಉಳಿಸಿಕೊಳ್ಳಲಾಗಿದ್ದು, ಗೂಗ್ಲ್ ಪ್ಲೇ ಸ್ಟೋರ್‌ನಿಂದ ಹೊಸ ಆ್ಯಪ್ ಅನ್ನು ಅಳವಡಿಸಿಕೊಳ್ಳಬಹುದು. ಎಲ್ಲಾ ಫೋಟೋಗಳು ತಕ್ಷಣವೇ ಬ್ಯಾಕಪ್‌ಗೆ ಹೋಗಿ ಫೋಲ್ಡರ್‌ನಲ್ಲಿ ಕೂರುತ್ತವೆ. ಈ ಫೋಟೋಗಳನ್ನು ಶೇರ್ ಮಾಡಿಕೊಳ್ಳುವುದೂ ಸುಲಭ.







## ಡ್ಯಾಷ್‌ಲೇನ್

ಇದು ನಿಮ್ಮ ಎಲ್ಲಾ ಪಾಸ್‌ವರ್ಡ್‌ಗಳನ್ನು ಸುಲಭವಾಗಿ ಸೃಷ್ಟಿಸುವುದಲ್ಲದೇ ಅವುಗಳನ್ನು ರಹಸ್ಯವಾಗಿ ಒಂದೆಡೆ ಕಾಪಿಡುತ್ತದೆ. ವೆಬ್‌ನಲ್ಲಾದರೆ ನಿಮ್ಮ ವೈಯಕ್ತಿಕ ಮಾಹಿತಿಯನ್ನು ಸೇರಿಸುತ್ತದೆ. ಸ್ಮಾರ್ಟ್‌ಫೋನ್, ಕಂಪ್ಯೂಟರ್ ಬಳಸುವವರಾದರೆ ಈ ಪಾಸ್‌ವರ್ಡ್‌ಗಳದ್ದೇ ದೊಡ್ಡ ತಲೆನೋವು. ಪ್ರತಿಯೊಂದಕ್ಕೂ ಯೂಸರ್‌ನೇಮ್, ಪಾಸ್‌ವರ್ಡ್‌ಗಳು ಬೇಕೇಬೇಕು. ಜೊತೆಗೆ ಇಷ್ಟೇ ಅಕ್ಷರಗಳಿರಬೇಕು, ಭದ್ರತೆ ಕಡಿಮೆ ಎಂಬ ಸೂಚನೆಗಳು ಬಂದು ಕಿರಿಕಿರಿ ಹುಟ್ಟಿಸುತ್ತವೆ. ಈ ಸಮಸ್ಯೆ ನಿವಾರಣೆಗೆ ಈ ಆ್ಯಪ್ ಅನ್ನು ಗೂಗ್ಲ್ ಪ್ಲೇನಿಂದ ಡೌನ್‌ಲೋಡ್ ಮಾಡಿಕೊಂಡು ಬಳಸಬಹುದು. ಆದರೆ ವಿವಿಧ ಡಿವೈಸ್‌ಗಳ ಮಧ್ಯೆ ಪಾಸ್‌ವರ್ಡ್‌ಗಳನ್ನು ಸಿಂಕ್ ಮಾಡಲು ಹೋದರೆ ಶುಲ್ಕ ನೀಡಬೇಕು.

## ಡಿಸಾಸ್ಟರ್ ಅಲರ್ಟ್

ಜಗತ್ತಿನಲ್ಲೆಡೆ ಸಂಭವಿಸುವ ನೈಸರ್ಗಿಕ ವಿಕೋಪಗಳ ಬಗ್ಗೆ ನಿಮ್ಮನ್ನು ಎಚ್ಚರಿಸುವ ಆ್ಯಪ್. ಇದರ ಮೂಲಕ ವಿಕೋಪಗಳ ಜಾಗೃತಿ ವೇದಿಕೆಯನ್ನು ಸಂಪರ್ಕಿಸಿ ಎಲ್ಲಾ ಅಂಕಿ– ಅಂಶಗಳನ್ನು ಪಡೆಯಬಹುದು. ಇದನ್ನು ಪೆಸಿಫಿಕ್ ಪ್ರಕೃತಿ ವಿಕೋಪ ಕೇಂದ್ರವು ಅಭಿವೃದ್ಧಿಪಡಿಸಿದ್ದು, ವಿಕೋಪಗಳ ನಿರ್ವಹಣೆ ಬಗ್ಗೆ ವಿವರಗಳನ್ನು ನೀಡುತ್ತದೆ. ಐಒಎಸ್ ಹಾಗೂ ಆ್ಯಂಡ್ರಾಯ್ಡ್ ಬಳಕೆದಾರರಿಗೆ ಲಭ್ಯವಿದ್ದು, ಸದ್ಯ 15 ಲಕ್ಷಕ್ಕೂ ಅಧಿಕ ಮಂದಿ ಇದನ್ನು ಬಳಸುತ್ತಿದ್ದಾರೆ.




## ಬರ್ನರ್




ನಿಮ್ಮ ಒಂದಕ್ಕಿಂತ ಅಧಿಕ ಅಥವಾ ತಾತ್ಕಾಲಿಕ ಫೋನ್ ನಂಬರ್‌ಗಳನ್ನು ನಿರ್ವಹಣೆ ಮಾಡುವ ಆ್ಯಂಡ್ರಾಯ್ಡ್ ಆ್ಯಪ್. ಬೇರೆ ಬೇರೆ ನಂಬರ್‌ಗಳಿಗೆ ಬರುವ ಸಂದೇಶಗಳನ್ನು ಕ್ರೋಢೀಕರಿಸುತ್ತದೆ. ತಾತ್ಕಾಲಿಕ ಫೋನ್ ನಂಬರ್‌ಗಳು ಎಂದ ಕೂಡಲೇ ಅಪರಾಧಿಗಳ ನೆನಪಾಗಬಹುದು. ಆದರೆ ವಿವಿಧ ವಹಿವಾಟುಗಳನ್ನು ನಡೆಸುವವರು, ಇಬೇನಲ್ಲಿ ಸರಕುಗಳನ್ನು ಮಾರಾಟ ಮಾಡುವವರು ಕೆಲವು ಬಾರಿ ತಾತ್ಕಾಲಿಕ ನಂಬರ್ ಪಡೆಯುತ್ತಾರೆ. ಈ ಆ್ಯಪ್ ತಾತ್ಕಾಲಿಕ ನಂಬರ್ ಸೃಷ್ಟಿಸುತ್ತದೆ. ಆದರೆ ಇದನ್ನು ದೀರ್ಘಕಾಲ ಬಳಸುವಂತಿಲ್ಲ ಮತ್ತು ಒಳ ಬರುವ ಕರೆಗಳಲ್ಲಿ ಕೆಲವು ಅಡೆತಡೆಗಳಿವೆ.

■ ಎಸ್. ತುಂಬೆ